ಹಸಿರು ಕಾರ್ಡುದಾರರಿಗೆ ಆಹಾರ ವಿತರಣೆ

4508 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರದಲ್ಲಿರುವ ಹಸಿರು ಕಾರ್ಡುದಾರರಿಗೆ ಎಷ್ಟು ಪ್ರಮಾಣದ ಆಹಾರ ಮತ್ತು ಸೀಮೆಎಣ್ಣೆ ಪ್ರತಿ ತಿಂಗಳು ವಿತರಣೆಯಾಗುತ್ತಿದೆ. ಅವುಗಳ ದರಗಳೆಷ್ಟು?

ಆ) ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿ ಹಸಿರು ಕಾರ್ಡುದಾರರಿಗೆ ಎಷ್ಟು ಪ್ರಮಾಣದ ಆಹಾರ ಮತ್ತು ಸೀಮೆಎಣ್ಣೆ ಪ್ರತಿ ತಿಂಗಳು ವಿತರಣೆ ಆಗುವುದು, ಇವುಗಳ ದರಗಳೆಷ್ಟು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ನಗರ ಪ್ರದೇಶದಲ್ಲಿನ ಹಸಿರು ಕಾರ್ಡುದಾರರಿಗೆ ಮಾಹೆಯಾನ ವಿತರಿಸುವ ಪಡಿತರ ಪದಾರ್ಥಗಳ ವಿತರಣಾ ಪ್ರಮಾಣ ಹಾಗೂ ದರಗಳ ವಿವರ.

ಪದಾರ್ಥ	ಪ್ರಮಾಣ ಪ್ರತಿ ಮಾಹೆ	ದರ ಪ್ರತಿ ಕೆ.ಜಿ.ಗೆ
ಅಕ್ಕಿ	16 ಕೆ.ಜಿ.	ರೂ. 6.15
ಗೋಧಿ	4 ಕೆ.ಜಿ.	ರೂ. 4.65
ಸಕ್ಕರೆ	3 ಕೆ.ಜಿ.	ರೂ. 13.00
ಸೀಮೆಎಣ್ಣೆ	6 ರಿಂದ 8 ಲೀ.	ರೂ. 8.80ರಿಂದ 9.50

ಆ) ಗ್ರಾಮಾಂತರ ಪ್ರದೇಶದ ಹಸಿರು ಕಾರ್ಡುದಾರರಿಗೆ ಮಾಹೆಯಾನ ವಿತರಿಸುವ ಪಡಿತರ ಪ್ರಮಾಣ ಹಾಗೂ ದರದ ವಿವರ.

ಪದಾರ್ಥ	ಪ್ರಮಾಣ ಪ್ರತಿ ಮಾಹೆ	ದರ ಪ್ರತಿ ಕೆ.ಜಿ.ಗೆ
ಅಕ್ಕಿ	16 ಕೆ.ಜಿ.	ರೂ. 6.15
ಗೋಧಿ	4 ಕೆ.ಜಿ.	ರೂ. 4.65
ಸಕ್ಕರೆ	1.5 ಕೆ.ಜಿ	ರೂ. 13.00
ಸೀಮೆಎಣ್ಣೆ	4 ಲೀ.	ರೂ. 8.80 ರಿಂದ 9.50